ಒಎಸ್ 109ಃ12 ಪಿಡಬ್ಲ್ಯೂ-1 ಪುರಂದರ ಕೆ
ದಿನಾಂಕ 12.06.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಜೆಎನ್‌ಪಿ ವಕೀಲರಿಂದ

ನಿಪಿ-39 ನ್ನು ತಾಲೂಕು ಭೂಮಾಪಕರು ದಿನಾಂಕ 16.11.2016 ರಂದು ತಯಾರು ಮಾಡಿದ್ದಾರೆ. ಅದನ್ನು ತಯಾರು ಮಾಡುವಾಗ ನಾನು ಭೂಮಾಪಕರು ಜೊತೆ ಇದ್ದೆನು. ನಿಪಿ-39ನ್ನು ಸ್ಥಳದಲ್ಲಿ ತಯಾರು ಮಾಡಿದ್ದಾರೆ. ನಿಪಿ-39ನ್ನು ತಯಾರು ಮಾಡುವಾಗ ನಾನು ಅಬೂಬಕರು ಮತ್ತು ರಮ್ಲಾ ಕುಂಜಿ ಇದ್ದೆವು. ನಿಪಿ-39 ನ್ನು ತಾಲೂಕು ಭೂಮಾಪಕರು ತಯಾರಿಸಿಲ್ಲ, ಅವರು ಯಾವತ್ತೂ ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿಕೊಡಿ ಎಂದು ನಾನು ಸ್ವತಃ ತಾಲೂಕು ಭೂಮಾಪಕರಿಗೆ ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಈ ದಾವಾ ಚಾಲ್ತಿಯಲ್ಲಿರುವಾಗ ನಾನು ದಾವಾ ಸ್ವತ್ತನ್ನು ಅಳತೆ ಮಾಡಿಸಿದ್ದೇನೆ. ಅಳತೆ ಕಾರ್ಯ ಮಾಡುವಾಗ ಪ್ರತಿವಾದಿಗಳಿಗೆ ನೋಟಿಸ್ ನೀಡಿದ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಿಪಿ-41 ನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-41 ರಂತೆ ಸ್ಥಳದಲ್ಲಿ ಯಾವುದೇ ಮಹಜರು ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-39ರಲ್ಲಿ ಕಾಣಿಸಿದ ರಸ್ತೆಯು ಸದರಿ ಜಾಗದಲ್ಲಿ ಹೋಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನೀಡಿದ ದೂರಿಗೆ ಪೋಲಿಸರು ನಿಪಿ-43ನ್ನು ನೀಡಿದ್ದಾರೆ. ನಾನು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-39 ರಿಂದ ನಿಪಿ-45ನ್ನು ನಾನು ನನ್ನ ಕೇಸಿಗೊಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ, ದ.ಕ.